# ಪ್ರಬಂಧ

ಪೀಠಿಕೆ:

ನಮ್ಮ ದೇಶ ಭಾರತ. ನಾವು ಭಾರತೀಯರು. ಇದೊಂದು ಉಪಖಂಡವು ಹೌದು. ಮೂರು ಕಡೆ ಸಮುದ್ರ,ಒಂದು ಕಡೆ ಮಹಾಪರ್ವತ ಇದೆ. ಅದುವೇ ಹಿಮಾಲಯ.

**ವಿಷಯ ವಿವರಣೆ** – ಈ ದೇಶವನ್ನು 'ಭರತ ಖಂಡ" ,ಹಿಂದೂಸ್ಥಾನ, ಇಂಡಿಯಾ' ಎಂದು ಕರೆಯುವರು. ನಮ್ಮ ದೇಶದ ವಿಸ್ತಶರ 32,87,263 ಚದರ ಕೀಲೋಮೀಟರ್‌ಗಳು ಇದು ಕಾಶ್ಮೀರದಿಂದ ಕನ್ಯಾಕುಮಾರಿ,ಪಂಜಾಬದಿಂದ ಮಣಿಪುರದವರೆಗೆ ಹಬ್ಬಿದೆ.

ಇಲ್ಲಿ ಹಿಂದೂ, ಮುಸ್ಲಿಂ, ಸಿಖ್, ಕ್ರೈಸ್ತ್, ಬೌದ್ಧ, ಜೈನ್, ಮುಂತಾದ ಮತದವರೂ ಇದ್ದಾರೆ. ಬಹುಧರ್ಮ, ಬಹುಭಾಷೆ, ಬಹುವೇಷ ಹೊಂದಿರುವ ದೊಡ್ಡ ದೇಶ ನಮ್ಮದು. ಈ ಜನ ಶಾಂತಿಪ್ರಿಯರು. ವಿಶಾಲಮನೋಭಾವದವರು. ಜಾತಿ– ಮತ –ಭಾಷೆ ಮೀರಿದವರು.

ಈ ದೇಶದಲ್ಲಿ ಗಂಗಾ, ಯಮುನಾ ,ಸಿಂಧೂ, ಕಾವೇರಿ, ಕೃಷ್ಣೆ,ಗೋದಾವರಿ ಮುಂತಾದ ನದಿಗಳು ಹರಿಯುತ್ತಿವೆ. ಬದುಕಿನ ಭೂಮಿಗೆ ನೀರುಣಿಸುತ್ತಿವೆ. ಕರಾವಳಿಯ ಸಾಗರದ ಚೆಲುವಿನಿಂದ ತುಂಬಿದೆ. ದಕ್ಷಿಣಪೀಠಭೂಮಿ ಫಲವತ್ತಾದ ನಾಡು. ಅದನ್ನು ಪಶ್ಚಿಮಘಟ್ಟಗಳು ಸುತ್ತುವರೆದಿವೆ. ಇದು ಹಚ್ಚ ಹಸುರಿನ ಕಾಡು. ಇಲ್ಲಿ ಹುಲಿ ಸಿಂಹ, ಆನೆ, ಜಿಂಕೆ, ಚಿರತೆ ಮುಂತಾದ ವನ್ಯಜೀವಿಗಳು ಇವೆ.

'ಜನಗಣಮನ' ಇದು ನಮ್ಮ ರಾಷ್ಟ್ರಗೀತೆ. ನಮ್ಮ ದೇಶದ ಬಾವುಟ ಮೂರು ಬಣ್ಣಗಳಿಂದ ಕೂಡಿದೆ. 'ಕೇಸರಿ' ತ್ಯಾಗದ  ಸಂಕೇತ.'ಬಿಳಿ' ಶಾಂತಿಯ ಪ್ರತೀಕ ಮತ್ತು 'ಹಸಿರು' ಸಮ್ಮೃದ್ಧಿಯ ಸೂಚಕ. ನಡುವೆ ಇರುವ ''ನೀಲಿ' ಬಣ್ಣದ ಚಕ್ರ ನಮ್ಮ ಧರ್ಮಚಕ್ರ, ಪ್ರಗತೀಯ ಸಂಕೇತ. ಇದವೇ ನಮ್ಮ ಬಾವುಟ.

ಬುದ್ಧ ಬಸವ, ಅಲ್ಲಮ, ಗಾಂಧಿ, ಅಂಬೇಡ್ಕರ್ ಮೊದಲಾದ ಮಹಾತ್ಮರು ಜನಿಸಿದ ನಾಡಿದು. ವಿವೇಕಾನಂದ ಅರವಿಂದರ ಗೂಡಿದು.

**ಉಪಸಂಹಾರ** – ಒಟ್ಟಿನಲ್ಲಿ ಸುಂದರ ,ಸಮ್ಮೃದ್ಧದಿಂದ ಕೂಡಿದ ನಮ್ಮ ಭಾರತ ದೇಶ. ಈ ನಾಡಿನ ರೈತ, ಸೈನಿಕ ನಮ್ಮ ದೇಶದ ಆಧಾರಸ್ತಂಭಗಳು.